ತಂದೆಯಾದ ಸಾಬು ಪೂವಯ್ಯನನ್ನು ಪರಿಚಯಿಸಿದ.

ಅಲ್ಲಿ ನಡೆದದ್ದು ಸಂಕ್ಷಿಪ್ತವಾಗಿ ಇಷ್ಟು: ಮೊದಲ ಮಹಡಿಯಲ್ಲಿದ್ದ ವಧುವಿನ ಕೋಣೆಯಿಂದ ಸುಮಾರು ಒಂದೂವರೆ ಲಕ್ಷ ಮೌಲ್ಯದ ನೆಕ್ಲೇಸ್ ಕಾಣೆಯಾಗಿತ್ತು. ನೆಕ್ಲೇಸ್ ಧರಿಸಲು ವಧು ಬಂದಾಗಲಷ್ಟೇ ಅದು ನಾಪತ್ತೆಯಾಗಿದ್ದು ಗೊತ್ತಾದದ್ದು. ಆಕೆಯ ಹೇಳಿಕೆಯಂತೆ, ಡ್ರೆಸ್ಸಿಂಗ್ ಕನ್ನಡಿಯೆದುರಿನ ಟೀಪಾಯಿಯ ಮೇಲೆ ಅದನ್ನು ಇರಿಸಿ ಹೋಗಿದ್ದಳು. ಗಡಿಬಿಡಿಯಲ್ಲಿ ಕೋಣೆಗೆ ಬಾಗಿಲಿನ ಅಗಳಿ ಹಾಕದೇ ಇದ್ದರೂ, ಅದನ್ನು ಮುಚ್ಚಿದ್ದೆ ಎನ್ನುವುದು ಆಕೆಯ ಅಂಬೋಣ. ಸಭಾಂಗಣದ ಮುಖ್ಯ ದ್ವಾರದ ಬಲಭಾಗದಲ್ಲಿ ಗೋಡೆಗೆ ಒತ್ತಿಕೊಂಡೇ ಮಹಡಿಗೆ ಹೋಗುವ ಮೆಟ್ಟಿಲುಗಳು. ಕಾರಿಡಾರ್ ಸೇರುವ ಕೊನೆಯ ಮೆಟ್ಟಿಲಿಗೆ ಮುಖ ಮಾಡಿ ಎದುರಿನ ಗೋಡೆಯಲ್ಲಿ ಸಿಸಿ ಟೀವಿ ಕ್ಯಾಮೆರಾ. ಮೆಟ್ಟಿಲೇರಿ ಬಂದ ಪ್ರತಿಯೊಬ್ಬರ ಚಿತ್ರವೂ ಲಭ್ಯ!

"ಸಿಸಿಟೀವಿ ನೋಡಿದರೆ ಕಳ್ಳನ ಪತ್ತೆ ಸುಲಭ!" ಸಾಬುಗೆ ನಾನು ಸೂಚಿಸಿದೆ.

"ಸಾರ್, ಸಿಸಿಟೀವಿ ನೋಡಿಯಾಗಿದೆ. ಕಳೆದ ಒಂದು ತಾಸಿನಲ್ಲಿ ಹಲವಾರು ಮಂದಿ ಓಡಾಡಿದ್ದಾರೆ. ಎಲ್ಲರೂ ನಮಗೆ ಆತ್ಮೀಯರೇ. ಯಾರನ್ನು ಅಂತ ಸಂಶಯಿಸೋದು? ಈ ಮದುವೆಗೆ ಎಷ್ಟೊಂದು ವಿಘ್ನಗಳು!!" ಕೊನೆಯ ವಾಕ್ಯ ಒಗಟಿನಂತೆ ಕಂಡಿತು.

ಹುಡುಗಿ ಮದುವೆಗೆ ಒಪ್ಪಿರಲಿಲ್ಲವಂತೆ. ಸದ್ಯಕ್ಕೆ ಮದುವೆ ಬೇಡ, ತನಗೆ ಕೆಲಸ ಮಾಡಬೇಕೆಂದು ಹಟ ಹಿಡಿದಿದ್ದಳಂತೆ. ಆದರೆ, ತನ್ನ ಹೆಂಡತಿಗೆ ಆರೋಗ್ಯ ಸಮಸ್ಯೆಯಿದ್ದುದರಿಂದ, ಪೂವಯ್ಯ ಮದುವೆಗೆ ಒತ್ತಡ ಹಾಕಿದ್ದನಂತೆ. ದೇವಯ್ಯ ಪಿಸುದನಿಯಲ್ಲಿ ಒಗಟು ಬಿಡಿಸಿದ!

"ಸಿಸಿಟೀವಿ ಫೂಟೇಜ್ ಮತ್ತೆ ನೋಡೋಣ. ಮೊದಲಿಗೆ ಸ್ಥಳ ಪರಿಶೀಲನೆ ಮುಗಿಸುವ." ಕರಮಚಂದ ಸೂಚಿಸಿದ.

ಸುಮಾರಾಗಿ ಸಭಾಂಗಣದ ಅರ್ಧದಷ್ಟು ಉದ್ದಕ್ಕೆ ಚಾಚಿದ ಮೊದಲ ಅಂತಸ್ತಿನಲ್ಲಿದ್ದ ಕಾರಿಡಾರ್. ಅದರ ಮಧ್ಯಭಾಗದಲ್ಲಿ ಸಭಾಂಗಣಕ್ಕೆ ಲಂಬವಾಗಿ ಇನ್ನೊಂದು ಕಾರಿಡಾರ್. ಅದರ ಎರಡೂ ಪಕ್ಕದಲ್ಲಿ ಎರಡೆರಡು ಕೊಠಡಿಗಳು. ಆ ಕಾರಿಡಾರಿನ ಅಂತ್ಯದಲ್ಲಿ ಬಾಲ್ಕನಿ. ನಾವು ಮದುಮಗಳ ಕೋಣೆ ಪ್ರವೇಶಿಸಿದೆವು.

ಸುಮಾರು ನೂರೈವತ್ತು ಚದರ ಅಡಿ ವಿಸ್ತೀರ್ಣದ ಕೋಣೆ. ಹೊಂದಿಕೊಂಡು ಸ್ನಾನಗೃಹ. ಮೆಲುವಾಗಿ ಹರಡಿದ ಸುಗಂಧ ದ್ರವ್ಯದ ಪರಿಮಳ. ಎತ್ತರದ ನಿಲುವುಗನ್ನಡಿಯೆದುರಿನ ಟೀಪಾಯಿ ತುಂಬಾ ಚದುರಿದ ಶೃಂಗಾರ ಸಾಧನಗಳು. ನೆಕ್ಲೇಸನ್ನು ಟೀಪಾಯಿ ಮೇಲೆ ಇರಿಸಿ ಯಾರೋ ಕರೆದರೆಂದು ಕೆಳಗಡೆ ಹೋಗಿದ್ದಳಂತೆ ರಾಖಿ. ವಾಪಸಾದಾಗ ನೆಕ್ಲೇಸ್ ಮಂಗಮಾಯ!

ಟೀಪಾಯಿ ಮೇಲಿದ್ದ ವಸ್ತುಗಳನ್ನು ಜಾಲಾಡಿಸುತ್ತಾ, ಬಾಚಣಿಗೆಯೊಂದನ್ನು ಪಕ್ಕಕ್ಕೆ ಸರಿಸುವಾಗ ಅಚ್ಚರಿ ಮೂಡಿತು. ಅರ್ಧದಷ್ಟು ಭಾಗದಲ್ಲಷ್ಟೇ ಹಲ್ಲುಗಳಿದ್ದ, ದಂತ ವರ್ಣದ ಬಾಚಣಿಗೆಯ ಕೆಳಗಡೆಯ ಭಾಗದಲ್ಲಿದ್ದ ಗೀಚು ಅಕ್ಷರಗಳು... 12345678! ಒಂದರಿಂದ ಎಂಟರ ತನಕದ ಅಂಕಿಗಳು!! ಕರಮಚಂದ ಭೂತಗನ್ನಡಿ ಹಿಡಿದು, ಪರಿಶೀಲಿಸಿದ.

"ಬಿದ್ದಪ್ಪ, ಈ ಅಂಕಿಗಳನ್ನು ಬರೆದು ಹೆಚ್ಚು ಸಮಯವಾದಂತಿಲ್ಲ. ಜೆಲ್ ಪೆನ್ನಿನ ಶಾಯಿ ಗಟ್ಟಿ ಮೇಲ್ಮೈ ಮೇಲೆ ಪಕ್ಕನೆ ಒಣಗದು. ನೋಡಿಲ್ಲಿ, ಬೆರಳು ತಾಗಿ, ಈಗ ಅಂಕಿ ತುಸು ಹರಡಿತು! ಇನ್ನೊಂದು ವಿಶೇಷ ಗಮನಿಸಿದೆಯಾ? ಒಂದು, ಎರಡು ಆದ ನಂತರ ಒಂದು ಪುಟ್ಟ ಚುಕ್ಕಿ ಕೂಡಾ ಇದೆ."

"ಈ ಬಾಚಣಿಗೆ ಮದುಮಗಳದ್ದೇ?"

"ಸಾಧ್ಯವಿಲ್ಲ! ಇದು ಪುರುಷರ ಬಾಚಣಿಗೆ!! ಯಾರೋ ಮರೆತು ಬಿಟ್ಟು ಹೋಗಿದ್ದಾರೆ!!"

"ಮರೆತ ಬಾಚಣಿಗೆ! ಇದು ನೆಕ್ಲೇಸ್ ಕಳ್ಳನದ್ದೇ?"

"ಸಾರ್, ಇದು ವಿಶು ಮಾಮಂದು. ಸ್ವಲ್ಪ ಹೊತ್ತಿಗೆ ಮುಂಚೆ ನಾನು ಅವರಿಂದ ಬಾಚಣಿಗೆ ತೆಗೆದುಕೊಂಡು ಬಾಚಿಕೊಂಡಿದ್ದೆ." ಹುಡುಗನೊಬ್ಬ ಉತ್ತರಿಸಿದ.

"ಪುಗ್ಗೇರ ವಿಶು. ನನ್ ಹೆಂಡ್ತಿ ತಮ್ಮ. ಅಧಿಕ ಪ್ರಸಂಗಿ! ಅವ್ನು ಇಲ್ಲಿಗೇಕೆ ಬಂದ?" ಪೂವಯ್ಯ ಅಸಮಾಧಾನ ಬಿಂಬಿಸಿದ.

ಯಾರೋ ವಿಶುವನ್ನು ಕರೆದಿರಬೇಕು. ಕೆಲ ಕ್ಷಣಗಳಲ್ಲಿ ನೀಳಕಾಯದ ಗಾಢ ವರ್ಣದ ಆಸಾಮಿ ಹಾಜರಾದ.

"ಈ ಬಾಚಣಿಗೆ ನಿಮ್ದೇನು?"